







## ಖಾಲಿಯಾದ ಗೂಡು!

ಹಕ್ಕಿಗಳ ಮೊಟ್ಟೆ ಕಂಡ ನಂತರ, ಮೊಬೈಲ್‌ನಲ್ಲಿ ಫೋಟೊ ಕ್ಲಿಕ್ಕಿಸಿ ನನ್ನಿಂದ ಇನ್ನು ತೊಂದರೆ ಬೇಡ ಎಂದು ಬಂದುಬಿಟ್ಟೆ. ಮಾರನೇ ದಿನದಿಂದ ಎಂಟ್ಹತ್ತು ಅಡಿ ದೂರದಿಂದಲೇ ಸೂಕ್ತ ಮರೆಜಾಗ ಮಾಡಿಕೊಂಡು, ಹಕ್ಕಿಗಳು ಕಾವು ಕೊಡುವ ಒಂದೆರಡು ಫೋಟೊ ಕ್ಲಿಕ್ಕಿಸಿದೆ. ಗಂಡು ಹಕ್ಕಿ ಕಾವು ಕೊಡುವ ಸರದಿ ಇದ್ದಾಗ ಹೆಣ್ಣು ಹಕ್ಕಿ ಆಹಾರ ಅರಸಿ ಹೋಗುವುದು, ನಂತರ ಹೆಣ್ಣು ಹಕ್ಕಿ ಕಾವು ಕೊಡುವಾಗ ಗಂಡು ಹಕ್ಕಿ ಆಹಾರ ಸೇವನೆಗೆ ತೆರಳಿ ಮರಳುವುದು ನಡೆದೇ ಇತ್ತು.

ಆದರೆ ಮೂರ್ನಾಲ್ಕು ದಿನಗಳ ನಂತರ ನೋಡಿದರೆ, ಪಕ್ಷಿ ಗೂಡಿನಲ್ಲಿಲ್ಲ. ಎಲ್ಲೋ ಹೊರ ಹೋಗಿರಬೇಕೆಂದು ಮನೆಗೆ ಹಿಂದಿರುಗಿದೆ. ಮನಸ್ಸಿನಲ್ಲೇಕೋ ತಳಮಳ. ಸ್ವಲ್ಪ ಸಮಯದ ನಂತರ ಮತ್ತೆ ಹೋಗಿ ನೋಡಿದೆ. ಹಕ್ಕಿಗಳಿರಲಿ, ಅವುಗಳ ಶಬ್ದವೂ ಇರಲಿಲ್ಲ. ಮನಸ್ಸಿನಲ್ಲಿ ಸಂಶಯ. ರಾತ್ರಿಯೆಲ್ಲಾ ಅದೇ ಯೋಚನೆಯಲ್ಲಿ ಕಳೆದ ನಾನು, ಮರಿಗಳನ್ನು– ಅವುಗಳ ಬೆಳವಣಿಗೆಯನ್ನು ದಾಖಲಿಸುವ ಅವಕಾಶ ಕೈ ತಪ್ಪಿತಲ್ಲ ಎಂದು ಕೊರಗುತ್ತಾ ಬೆಳಿಗ್ಗೆ ಏಳುತ್ತಿದ್ದಂತೇ ಅಲ್ಲಿಗೆ ಹಾಜರಾಗಿದ್ದೆ. ಹಕ್ಕಿಗಳು ನಾಪತ್ತೆ! ನನ್ನ ಸಂದೇಹ ಇನ್ನೂ ಬಲವಾಯಿತು.

ಗೂಡಿನ ಹತ್ತಿರ ಹೋಗಿ ನೋಡಿದೆ. ನನ್ನ ಊಹೆ ನಿಜವಾಗಿತ್ತು. ಮೊಟ್ಟೆಗಳು ಗೂಡಿನಲ್ಲಿರಲಿಲ್ಲ. ಬದಲಾಗಿ ಒಂದು ಮೊಟ್ಟೆಯ ಚೂರು ಗೂಡಿನಲ್ಲಿ, ಉಳಿದ ಚೂರುಗಳು ಕೆಳಗೆ ನೆಲದಲ್ಲಿ! ಮೊಟ್ಟೆ ಇಡುವುದಷ್ಟೇ ಅಲ್ಲ, ಅವುಗಳನ್ನು ಕಾಪಾಡಿಕೊಳ್ಳುವುದೂ ಈ ಹಕ್ಕಿಗಳಿಗೆ ಎಷ್ಟು ಕಷ್ಟವಲ್ಲವೇ?

## ನಿಸರ್ಗವೇ ತೊಟ್ಟಿಲು

ಈ ಸಂಗತಿ ನಡೆದ 5 ದಿನಗಳ ನಂತರ ಆ ಸ್ಥಳದ ಸಮೀಪವೇ ಮತ್ತೆರಡು ಹಕ್ಕಿಗಳು ಹಾರಿ ಹೋಗುತ್ತಿರುವುದು ಕಂಡೆ. ಮತ್ತೆ ನನ್ನಲ್ಲಿ ಕುತೂಹಲ. ಜಾಡು ಅನುಸರಿಸಿ ಹೋದಾಗ, ಸುಮಾರು 50 ಮೀಟರ್ ದೂರದಲ್ಲಿ ಅದೇ ಜಾತಿಯ ಮತ್ತೊಂದು ಹಕ್ಕಿ ಗೂಡು ಕಂಡಿತು. ಅದು ಮೊಟ್ಟೆ ಇಟ್ಟು ಮರಿ ಮಾಡಿ ಮೂರ್ನಾಲ್ಕು ದಿನಗಳಾಗಿದ್ದವಷ್ಟೆ. ಮೊದಲಿನಂತೆಯೇ, ಪ್ರತಿದಿನ ಬೆಳಿಗ್ಗೆ, ಸಂಜೆ ಮರೆಯಲ್ಲಿ ನಿಂತು ಗಮನಿಸಿದೆ.

ಆಗಾಗ ಜಿಟಿಜಿಟಿ ಮಳೆ. ಕೆಲವೊಮ್ಮೆ ಜೋರು ಮಳೆ. ಗಂಡು–ಹೆಣ್ಣು ಹಕ್ಕಿ ಆಹಾರ ಹುಡುಕಿ ತರುವ ಸರದಿ ಮುಂದುವರೆದೇ ಇತ್ತು. ಆಹಾರ ಕೊಟ್ಟ ನಂತರ ಮರಿಗಳು ನೆನೆಯದಂತೆ ಅವುಗಳ ಮೇಲೆ ಹಕ್ಕಿ ಕೂರುತ್ತಿತ್ತು. ಜೋರಾದ ಗಾಳಿಗೆ ಗೂಡು ಕಟ್ಟಿದ ಗಿಡ ಆ ಕಡೆಯಿಂದ ಈ ಕಡೆಗೆ ಓಲಾಡುತ್ತಿತ್ತು. ನನಗೆ ಆ ಕ್ಷಣದಲ್ಲಿ, ಈ ಮರಿಗಳಿಗೆ ನಿಸರ್ಗವೇ ತೊಟ್ಟಿಲು ತೂಗುತ್ತಿದೆಯಲ್ಲ ಅನಿಸಿತ್ತು.

ನಾಲ್ಕು ದಿನ ಕಳೆದು, ಮಳೆಯಾಗುತ್ತಿದ್ದ ಒಂದು ಮಧ್ಯಾಹ್ನ ಅವುಗಳ ಫೋಟೊ ತೆಗೆಯಲು ಕೊಡೆ ಹಿಡಿದು ಹೊರಟೆ. ಆದರೆ, ದೂರದಿಂದಲೇ ಪಕ್ಷಿಗಳು ವಿಚಿತ್ರ ದನಿಯಲ್ಲಿ ಕಿರುಚುತ್ತಿದ್ದುದು ಕಿವಿಗಪ್ಪಳಿಸಿತು. ಗಾಬರಿಯಿಂದ ನೋಡಿದರೆ, ಗಿಡದಿಂದ ಗಿಡಕ್ಕೆ ಅತ್ತಿಂದಿತ್ತ ಚಡಪಡಿಸುತ್ತ ಹಕ್ಕಿಗಳು ಅರಚುತ್ತಿವೆ. ಏನೋ ಅನಾಹುತ ಆಗಿರಬಹುದೆಂದು ಊಹಿಸಿದೆ. ಒಂದು ಹಕ್ಕಿ ಗೂಡಿರುವ ಗಿಡದ ಕಡೆ ಹಾರಿತು. ಮತ್ತೊಂದು, ಗಿಡದ ಮೇಲೇ ಕುಳಿತು ಚಡಪಡಿಸುತ್ತಿತ್ತು.

ಹತ್ತಿರ ಹೋಗಿ ನೋಡಿದರೆ, ಹಕ್ಕಿ ಗೂಡು ಇಲ್ಲ! ಅರೆ ಏನಾಯಿತೆಂದು ಕೆಳಗೆ ನೋಡಿದರೆ, ಗಿಡಗಳ ನಡುವೆ ಗೂಡು ತಲೆಕೆಳಕಾಗಿ ಬಿದ್ದಿದೆ. ಮೊನಾರ್ಕ್ ಮರಿಗಳು ಅದರೊಳಗೆ ಬಂಧಿಯಾಗಿವೆ! ಇವುಗಳಿಗೆ ಎತ್ತಲು ನಮ್ಮಂತೆ ಕೈಗಳೂ ಇಲ್ಲವಲ್ಲ ಎಂದು ಅವುಗಳ ಅಸಹಾಯಕತೆಗೆ ಮರುಗಿದೆ.

ಗೂಡನ್ನು ಮುಟ್ಟುವುದಾ? ಬೇಡವಾ? ಮರಿಗಳನ್ನು ಮುಟ್ಟಿದರೆ ಅವುಗಳ ತಂದೆ ತಾಯಿ ಮರಿಗಳನ್ನು ತ್ಯಜಿಸಿ ಹೋಗುತ್ತವೆ ಎಂದು ಕೇಳಿದ್ದೆ. ಆ ರೀತಿ ಆದರೆ ಮರಿಗಳು ಉಪವಾಸದಿಂದ ಸಾಯುತ್ತವೆ. ನಾನು ಗೂಡು ತೆಗೆದಿಡದಿದ್ದರೂ ಮರಿಗಳು ಇರುವೆಗಳ ಪಾಲಾಗುವುದಂತೂ ನಿಶ್ಚಿತ ಎಂದು ನಿರ್ಧರಿಸಿ, ಗೂಡನ್ನು ತೆಗೆದು ಗಿಡದ ಮೇಲಿಡಲು ಪ್ರಯತ್ನಿಸಿದೆ. ಅದು ಮಳೆಯಲ್ಲಿ ನೆಂದು ತೊಪ್ಪೆಯಾಗಿತ್ತು. ನಿಲ್ಲುವಂತೆ ಕಾಣಲಿಲ್ಲ. ತಕ್ಷಣ ಮನೆಗೆ ದೌಡಾಯಿಸಿದೆ.

ಪಿಂಜಿ ಹುರಿ ಹಿಡಿದು ಬಂದೆ. ಮರಿಗಳು ಹಸಿವಿನಿಂದ ಮುದುರಿಕೊಂಡಿದ್ದವು. ದಾರದ ಎಳೆ ಬಿಡಿಸಿ ಗೂಡಿನ ಸುತ್ತಲೂ ಬರುವಂತೆ ಗಿಡದ ಕಾಂಡ ಸೇರಿಸಿ ಕಟ್ಟಿದೆ. ಸ್ವಲ್ಪ ದೂರ ನಿಂತೆ. ಮರಿಗಳ ಮೈಗೆ ಹತ್ತಿದ್ದ ಇರುವೆಗಳನ್ನೆಲ್ಲಾ ತೆಗೆಯುತ್ತಿದ್ದವು. ಒಂದರ್ಧ ಗಂಟೆ ನಿಂತೆ. ಅವು, ಆಹಾರ ತಂದು ತಿನಿಸಲು ಆರಂಭಿಸಿದವು.

ಆದರೆ ಮಳೆ– ಗಾಳಿಗೆ ಗೂಡು ಸ್ವಲ್ಪ ಓರೆಯಾಗಿ ಮರಿಗಳು ಮತ್ತೆ ಬೀಳುವುದರಲ್ಲಿದ್ದವು. ಗೂಡಿನ ಮೇಲ್ಭಾಗ ರಂಧ್ರ ಮಾಡಿ, ಅದರ ಮೂಲಕ ದಾರ ಪೋಣಿಸಿ ಗಿಡದ ಕಾಂಡಕ್ಕೆ ಭದ್ರವಾಗಿ ಕಟ್ಟಿದೆ. ಗೂಡು ಅಲುಗಾಡುವುದಿಲ್ಲ ಎಂದು ಖಾತರಿಯಾಯಿತು.

ಮನಸಲ್ಲಿ ಸಮಾಧಾನ ಮನೆ ಮಾಡಿತ್ತು. ಪ್ರಕೃತಿಯ ಸೋಜಿಗವನ್ನು, ಹಕ್ಕಿಗಳ ಜೀವನ ಪ್ರೀತಿಯನ್ನು ಕಂಡು ಮೂಕನಾದೆ. ಎರಡು ಮರಿಗಳ ಜೀವ ಉಳಿಸಿದ ನೆಮ್ಮದಿಯೊಂದಿಗೆ ವಾಪಸ್ಸಾದೆ.